**O.S.No.2170/2006 - D.W.2**

**ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 07-07-2023.**

**ಪಾಟೀ ಸವಾಲು - ವಾದಿಯ ಪರ ವಕೀಲರಿಂದ :**

**1)** ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಇಂಗ್ಲೀಷ್ ಭಾಷೆ ಬರುವುದಿಲ್ಲ. ನಾನು 7 ನೇ ತರಗತಿ ಓದಿರುತ್ತೇನೆ. ನಾನು ಚೀಮಾಚನಹಳ್ಳಿಯಲ್ಲಿ ಹುಟ್ಟಿ ಬೆಳೆದಿರುತ್ತೇನೆ. ಅಲ್ಲಿ ನನ್ನ ಮನೆ ಆಸ್ತಿ ಇದೆ. ಮುತ್ತೂರು ಬಸಪ್ಪ ರವರ ಮನೆಗೂ ನಮ್ಮ ಮನೆಗೂ ಅರ್ಧ ಕಿಲೋ ಮೀಟರ್ ಅಂತರ ಇರುತ್ತದೆ. ಚೀಮಾಚನಹಳ್ಳಿ ಒಂದು ಚದರ ಕಿಲೋ ಮೀಟರ್ ವಿಸ್ತೀರ್ಣ ಇದೆ. ಮುತ್ತೂರು ಬಸಪ್ಪ ಮತ್ತು ನಮ್ಮ ಮನೆಗೆ 200 ರಿಂದ 300 ಅಡಿ ಅಂತರ ಇದೆ ಎಂದರೆ ಸರಿ. ನಾವು ದೂರದ ನೆಂಟರು ಎಂದರೆ ಸರಿ.

**2)** ದಾವಾ ಸ್ವತ್ತನ್ನು ಖರೀದಿಸುವಾಗ ನಾನು ಪಹಣಿ ಹಾಗೂ ಮ್ಯುಟೇಶನ್ ಅನ್ನು ಪರಿಶೀಲಿಸಿರುತ್ತೇನೆ. ಆಗ ಪಹಣಿ ಪತ್ರಿಕೆ ಬಸಪ್ಪ ರವರ ಹೆಸರಿನಿಂದ 1 ನೇ ಪ್ರತಿವಾದಿಯ ಹೆಸರಿಗೆ ಪವತಿ ವಾರಸ್ಸು ಆಗಿರುತ್ತದೆ. ಸದರಿ ಮ್ಯುಟೇಶನ್ ಆದೇಶವನ್ನು ನಾನು ತಿಳಿದುಕೊಂಡಿರುತ್ತೇನೆ. ವಾದಿಗಳು ಹಾಕಿರುವ ದಾಖಲಾತಿಗಳನ್ನು ನಾನು ಗಮನಿಸಿರುವುದಿಲ್ಲ. ನಾವು ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿರುತ್ತೇನೆ. ನಾನು ಕ್ರಯ ಮಾಡಿದ ಮೂಲ ಕ್ರಯಪತ್ರ ನನ್ನ ಬಳಿ ಇದೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ಮೂಲ ಕ್ರಯಪತ್ರ ಹೋಗಿಬಿಡುತ್ತದೆ ಎಂಬ ಕಾರಣಕ್ಕೆ ನಾನು ದೃಢೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಮೂಲ ದಾಖಲೆ ನನ್ನ ಬಳಿ ಇದ್ದು ದೃಢೀಕೃತ ಪ್ರತಿಯನ್ನು ಹಾಜರುಪಡಿಸುತ್ತಿದ್ಧೇನೆ ಎಂದು ನ್ಯಾಯಾಲಯಕ್ಕೆ ತಿಳಿಸಿರುತ್ತೇನೆ.

**3)** ಕೆಂಪಮ್ಮ ಮತ್ತು ಮುನಿಯಮ್ಮ ರವರ ಹೇಳಿಕೆಯ ಮೇರೆಗೆ 1 ನೇ ಪ್ರತಿವಾದಿಯ ಹೆಸರಿಗೆ ಪಹಣಿ ಪತ್ರಿಕೆ ಮಾಡಿರುತ್ತಾರೆ ಎಂದರೆ ಮುನಿಯಮ್ಮ ಯಾರು ಎಂದು ಗೊತ್ತಿಲ್ಲ ಎಂದು ನುಡಿಯುತ್ತೇನೆ. ಕೆಂಪಮ್ಮ ರವರ ಹೇಳಿಕೆಯ ಮೇರೆಗೆ ಪಹಣಿ ಮಾಡಲಾಗಿದೆ ಎಂದು ತೋರಿಸಲು ದಾಖಲೆಯನ್ನು ನಾನು ಈಗಾಗಲೇ ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.22 ರಿಂದ 26 ರ ಪ್ರಕಾರ ಕೆಂಪಮ್ಮ ಮತ್ತು ಮುನಿಯಮ್ಮ ಇಬ್ಬರ ಹೇಳಿಕೆಯ ಮೇರೆಗೆ ಪಹಣಿ ಪತ್ರಿಕೆಯನ್ನು ಮಾಡಲಾಗಿದೆ ಎಂದರೆ ಸದರಿ ದಾಖಲೆಗಳನ್ನು ಸೃಷ್ಟಿ ಮಾಡಲಾಗಿದೆ ಎಂದು ನುಡಿಯುತ್ತೇನೆ. ಕ್ರಯಪತ್ರ ಮಾಡಿಕೊಡುವಾಗ ಸದರಿ ದಾಖಲೆಗಳ ಬಗ್ಗೆ ನನ್ನ ಗಮನಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ಆದರೂ ಸಹ 1 ನೇ ಪ್ರತಿವಾದಿಯ ಜೊತೆ ಶಾಮೀಲಾಗಿ ಕ್ರಯಪತ್ರವನ್ನು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಮುತ್ತೂರು ಬಸಪ್ಪ ರವರಿಗೆ ಕೆಂಪಮ್ಮನ ಮುಖಾಂತರ ನಾರಾಯಣಮ್ಮ ಎಂಬ ಮಗಳು ಹಾಗೂ 2 ನೇ ಹೆಂಡತಿ ಮುನಿಯಮ್ಮಳ ಮುಖಾಂತರ ಮುನಿತಾಯಮ್ಮ ಎಂಬ ಮಗಳು ಇದ್ದರೂ ಎಂದರೆ ನನಗೆ ಗೊತ್ತಿಲ್ಲ. ನಾನು ನಾರಾಯಣಮ್ಮ ರವರ ಸಮ್ಮತಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ನಾರಾಯಣಮ್ಮ ಕ್ರಯಪತ್ರಕ್ಕೆ ಪಕ್ಷಗಾರಳಲ್ಲ. ಅವರ ಬಗ್ಗೆ ನನಗೆ ಮಾಹಿತಿ ಇಲ್ಲದೇ ಇರುವುದರಿಂದ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ.

**4)** 1 ನೇ ಪ್ರತಿವಾದಿ ಸಾಲ ಮರುಪಾವತಿಗಾಗಿ ಹಾಗೂ ಮಕ್ಕಳ ಪೋಷಣೆಗಾಗಿ ದಾವಾ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ. ಸದರಿ ಸಾಲದ ಬಗ್ಗೆ ನನಗೆ ಮಾಹಿತಿ ಇಲ್ಲ. ಕ್ರಯಪತ್ರದಲ್ಲಿ ಆ ಬಗ್ಗೆ ನಮೂದು ಮಾಡಿರಬಹುದು. ನಾರಾಯಣಮ್ಮ, ಮುನಿತಾಯಮ್ಮ ಹಾಗೂ ಮುನಿಯಮ್ಮ ರವರಿಗೆ ದಾವಾ ಸ್ವತ್ತಿನಲ್ಲಿ

ಹಕ್ಕು ಇರುವುದು ಗೊತ್ತಿದ್ದು ಸಹ ನಾನು 1 ನೇ ಪ್ರತಿವಾದಿಯ ಜೊತೆ ಶಾಮೀಲಾಗಿ ಕ್ರಯಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**5)** ಮುತ್ತೂರು ಬಸಪ್ಪ ರವರಿಗೆ ದಾವಾ ಸ್ವತ್ತು ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಅವರು ಯಾವಾಗ ತೀರಿಹೋಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಕ್ರಯಪತ್ರ ಮಾಡಿಕೊಳ್ಳುವ ಹಿಂದೆ ಅವರು ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಕ್ರಯಪತ್ರ ಮಾಡಿಕೊಳ್ಳುವಾಗ ಕೆಂಪಮ್ಮ ಮರಣ ಹೊಂದಿದ್ದರು. ಕ್ರಯಪತ್ರ ಮಾಡಿಕೊಳ್ಳುವಾಗ ಕೆಂಪಮ್ಮ ರವರು ಜೀವಂತ ಇದ್ದರು ಎಂದರೆ ಸರಿಯಲ್ಲ. ಕ್ರಯಪತ್ರ ಆದ ನಂತರ ಕೆಂಪಮ್ಮ ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಹೆಸರಿಗೆ ರೆವಿನ್ಯೂ ದಾಖಲೆಗಳನ್ನು 1986 ರಲ್ಲಿ ಬದಲಾವಣೆ ಮಾಡಿಕೊಂಡಿರುತ್ತೇನೆ. ಸದರಿ ಮ್ಯುಟೇಶನ್ ಆದೇಶವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಲಿಖಿತ ಹೇಳಿಕೆ ಹಾಗೂ ಪ್ರಮಾಣ ಪತ್ರವನ್ನು ಸಲ್ಲಿಸಲು ವಕೀಲರಿಗೆ ನಾನು ಮಾಹಿತಿ ನೀಡಿರುತ್ತೇನೆ. 2 ನೇ ಪ್ರತಿವಾದಿ ಮರಣ ಹೊಂದಿದ ನಂತರ ಅವರ ಮಗ ಸಲ್ಲಿಸಿದ ತಕರಾರಿನ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. 2003 ರವರೆಗೂ ದಾವಾ ಐಟಂ ನಂ.2 ರ ರೆವಿನ್ಯೂ ದಾಖಲೆಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿ ಮುಂದುವರೆದಿರುತ್ತದೆ ಎಂದರೆ ದಾಖಲೆಗಳ ಪ್ರಕಾರ ಇರಬಹುದು. ದಾವಾ ಐಟಂ ನಂ.2 - ಮುತ್ತೂರು ಬಸಪ್ಪ ರವರು ಗಳಿಸಿದ ಆಸ್ತಿ ಎಂದರೆ ಸರಿ.

**6)** ಮುಂದುವರೆದ ಪಾಟೀ ಸವಾಲಿಗೆ ವಾದಿಯ ಪರ ವಕೀಲರು ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**